# ಬಹುತ್ವ ಸಂಕಥನ

## ಭಾಷೆ-ಸಾಹಿತ್ಯ-ಸಂಸ್ಕೃತಿ ನಿರ್ವಚನ


ಸಂಪಾದಕರು

**ಡಾ. ಶುಭಾ ಮರವಂತೆ**

ಸಹ ಸಂಪಾದಕರು

**ಶ್ರೀ ದೊಡ್ಡನಾಯ್ಕ್ ಎಚ್**

**ಶ್ರೀ ಕುಮಾರಸ್ವಾಮಿ**

**ಓಂಕಾರ್ ನಾಯ್ಕ್ ಜಿ.**


ಕುವೆಂಪು ವಿಶ್ವವಿದ್ಯಾಲಯ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗದ ಕನ್ನಡ ವಿಭಾಗವು ಆಯೋಜಿಸಿದ ರಾಷ್ಟ್ರಮಟ್ಟದ ಬಹುಶಿಸ್ತೀಯ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನ

Scanned with OKEN Scanner

ORCID . ID
0000 0002 3834 2941

ಕುವೆಂಪು ವಿಶ್ವವಿದ್ಯಾಲಯ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಶಿವಮೊಗ್ಗದ
ಕನ್ನಡ ವಿಭಾಗವು ಆಯೋಜಿಸಿದ ರಾಷ್ಟ್ರಮಟ್ಟದ ಬಹುಶಿಸ್ತೀಯ ವಿಚಾರಸಂಕಿರಣದಲ್ಲಿ ಮಂಡಿತವಾದ
ಪ್ರಬಂಧಗಳ ಸಂಕಲನ

# ಬಹುತ್ವ ಸಂಕಥನ

## ಭಾಷೆ–ಸಾಹಿತ್ಯ–ಸಂಸ್ಕೃತಿ ನಿರ್ವಚನ

ORCID Password
bheemanaik@1

ಸಂಪಾದಕರು:
**ಡಾ. ಶುಭಾ ಮರವಂತೆ**

ಸಹ ಸಂಪಾದಕರು:
**ಶ್ರೀ ದೊಡ್ಡನಾಯ್ಕ ಎಚ್**
**ಶ್ರೀ ಕುಮಾರಸ್ವಾಮಿ**
**ಶ್ರೀ ಓಂಕಾರ್ ಜಿ. ನಾಯ್ಕ**

**ಗೀತಾಂಜಲಿ ಪುಸ್ತಕ ಪ್ರಕಾಶನ**
ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ
ಶಿವಮೊಗ್ಗ – ೫೭೭ ೨೦೧

# BAHUTVA SANKATHANA
# BHASHE-SAHITYA-SAMSKRUTI NIRVACHANA
(A collection of articles)

Chief Editor
**Dr..Shubha Maravanthe**
Associate Editors
**Sri Dodda Naik H.**
**Sri Kumaraswamy**
**Sri Onakar G. Naik**

Published by
**GEETHANJALI PUSTHAKA PRAKASHANA**
Revenue Building, 100ft Road, Rajendra Nagar,
Shimoga - 577201, Karnataka.
Mobile: 9449886390, 9916197291.
E-mail: gbtmohan@gmail.com

**ISBN: 978-93-86855-17-6**

First Impression: 2019

Pages: 768

Price : Rs. 700

Paper Used: 70 GSM. Maplitho Size: Demy 1/8

© ಆಯಾ ಲೇಖಕರು

ಮೊದಲನೆಯ ಮುದ್ರಣ: ೨೦೧೯

ಪುಟಗಳು: ೭೬೮

ಬೆಲೆ: ರೂ. ೭೦೦

ಮುಖಪುಟ ವಿನ್ಯಾಸ: ಜಿಬಿಟಿ ಗ್ರಾಫಿಕ್ಸ್

**ಪುಸ್ತಕ ದೊರೆಯುವ ಸ್ಥಳ**
**ಜಿ.ಬಿ.ಟಿ ಪಬ್ಲಿಕೇಷನ್ಸ್**
ದೊಣ್ಣೇಹಳ್ಳಿ ಅಂಚೆ, ಜಗಳೂರು (ತಾ) ೫೭೭ ೫೨೮
ದಾವಣಗೆರೆ ಜಿಲ್ಲೆ. ಮೊ: ೯೯೧೬೧೯೭೨೯೧

ಪ್ರಕಾಶಕರು
**ಗೀತಾಂಜಲಿ ಪುಸ್ತಕ ಪ್ರಕಾಶನ**
ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ
ಶಿವಮೊಗ್ಗ - ೫೭೭ ೨೦೧
ದೂರವಾಣಿ: ೯೪೪೯೮೮೬೩೯೦
ಮುದ್ರಣ : ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು.

- ಕರ್ನಾಟಕದಲ್ಲಿ ರೈತರ ಆತ್ಮಹತ್ಯೆ: ಕಾರಣಗಳು ಮತ್ತು ಸವಾಲುಗಳು — ಡಾ. ಈ. ತಿಪ್ಪೇಸ್ವಾಮಿ — ೮೭
- ಭಾರತೀಯ ನ್ಯಾಯ ಪರಿಕಲ್ಪನೆ ಮತ್ತು ಧರ್ಮ — ದೇವರಾಜ ಮಹಾದೇವಪ್ಪ ಸರಾಪದ — ೯೩
- ಉತ್ತರದೇವಿ ಮಹಿಳೆಯರ ಅಸ್ಮಿತೆ — ಅಶ್ವಿನಿ ಎಮ್ ಎಸ್ — ೯೯
- ಕನ್ನಡ ಸಾಹಿತ್ಯ : ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಂವಿಧಾನ — ಡಾ. ಕೆ ಶ್ರೀಪತಿ — ೧೦೩
- ಸಂವಿಧಾನ: ಸ್ವಾತಂತ್ರ್ಯ ಮತ್ತು ಸಮಾನತೆಯ ಆಶಯಗಳು — ಶ್ರೀಲಕ್ಷ್ಮೀ ವೈ.ಎಸ್ — ೧೦೮
- ತ.ರಾ.ಸು. ಅವರ ಕಾದಂಬರಿಗಳಲ್ಲಿ ಸಾಮಾಜಿಕ ಪ್ರಜ್ಞೆ — ಅಶೋಕ ಮುರಾಳ — ೧೧೨
- ಆಧುನಿಕ ಮಹಿಳಾ ಕಾವ್ಯದಲ್ಲಿ ಉಪಮೆಗಳ ಬಳಕೆ : ಅಸ್ತಿತ್ವ ನಿರ್ವಚನ — ಅನಿತ ಸಿ. ಬಿ. — ೧೧೬
- ಅಜ್ಞಾತ ಶರಣೆಯ ವಚನ – ಪ್ರಗತಿಪರ ಸಂಸ್ಕೃತಿ ವಿನ್ಯಾಸ — ಡಾ. ಶೀಲಾದೇವಿ ಎಸ್.ಮಳೀಮಠ — ೧೨೨
- ಕರ್ನಾಟಕದ ಬುಡಕಟ್ಟು ಜನಾಂಗ ಮತ್ತು ಸಂಸ್ಕೃತಿ — ಅನುಷಾ ಎಸ್.ಜಿ — ೧೨೮
- ಬಿ.ಜಿ.ಎಲ್.ಸ್ವಾಮಿಯವರ ಸಾಹಿತ್ಯದಲ್ಲಿ ವೈಜ್ಞಾನಿಕ ಚಿಂತನೆ — ಆಶಾ.ವಿ — ೧೩೪
- ಸಂಸ್ಕೃತ ಸಾಹಿತ್ಯದಲ್ಲಿ ಬಹುತ್ವದ ಆಶಯಗಳು — ಶ್ರೀಮತಿ ವಿದುಷಿ ಬಂಗಾರಮ್ಮ ಕೆ. — ೧೩೯
- ಜಾತಿ ಮತ್ತು ಧರ್ಮ : ಪ್ರಸ್ತುತ ಬಿಕ್ಕಟ್ಟು — ಭಾಗ್ಯಲಕ್ಷ್ಮಿ ಆರ್ ಸಿ — ೧೪೩
- ಕಾವ್ಯದ ಬೆಳಕಲ್ಲಿ ಭಾವನಾತ್ಮಕ ಬುದ್ಧಿವಂತಿಕೆ — ತಾರಾಪ್ರಸಾದ್ — ೧೪೯
- ಭಾಷಾ ವೈವಿಧ್ಯತೆ — ಜಿ. ಶೀಲಾವತಿ — ೧೫೭
- ಗಿರಿಜನ ಮಹಿಳಾ ಬದುಕಿನ ಸಂಕಷ್ಟಗಳು ಮತ್ತು ಸೋಪಜ್ಞತೆ — ಡಾ. ಜಿ. ಕೆ. ಪ್ರೇಮ — ೧೬೩
- ಶಿಕ್ಷಣ ಕ್ಷೇತ್ರಕ್ಕೆ ಸಂಸ್ಕೃತಿಯ ಪ್ರಭಾವ — ಭೀಮನಾಯ್ಕ ಎಸ್. — ೧೬೮
- ತಳಸಮುದಾಯಗಳಲ್ಲಿ ವಲಸೆ ಮಹಿಳೆಯರ ಅಲೆಮಾರಿತನದ ಬದುಕು — ಭುವನೇಶ್ವರಿ ಕಾಂಬಳೆ — ೧೭೩
- ವೈದೇಹಿಯವರ ಸಾಹಿತ್ಯದಲ್ಲಿ ಮಹಿಳಾ ಅಸ್ತಿತ್ವ ನಿರ್ವಚನ — ಚಂದನಾ ಕೆ. ಎಸ್ — ೧೭೮




Scanned with OKEN Scanner

# ಶಿಕ್ಷಣ ಕ್ಷೇತ್ರಕ್ಕೆ ಸಂಸ್ಕೃತಿಯ ಪ್ರಭಾವ

ಭೀಮನಾಯ್ಕ ಎಸ್.
ಸಹಾಯಕಪ್ರಾಧ್ಯಾಪಕರು, ಅಲಂಕಾರಶಾಸ್ತ್ರ ವಿಭಾಗ ಕರ್ನಾಟಕ ಸಂಸ್ಕೃತ
ವಿಶ್ವವಿದ್ಯಾಲಯ ಚಾಮರಾಜಪೇಟೆ, ಬೆಂಗಳೂರು-೫೬೦೦೧೮

**ಪೀಠಿಕೆ :-**

ಯಾವುದೇ ಭಾಷೆ ಒಂದು ಸಂಸ್ಕೃತಿಯ ಕನ್ನಡಿ, ಅದರಂತೆ ಸಂಸ್ಕೃತ ಭಾಷೆಯೂ ಭಾರತೀಯ ಸಂಸ್ಕೃತಿಯ ಕನ್ನಡಿ. ಜೀವನದ ಮೌಲ್ಯಗಳು ಈ ಭಾಷೆಯಲ್ಲಿ ನೆಲೆಗೊಂಡಿದೆ. ರಾಮ-ಕೃಷ್ಣರಂತಹ ಅವತಾರಪುರುಷರ ಅಮರಚರಿತ್ರೆ, ಅಮೋಘ ಉಪನ್ಯಾಸ, ತತ್ತ್ವಜಿಜ್ಞಾಸೆಗಳು ಈ ದಿವ್ಯವಾದ ಸಂಸ್ಕೃತಭಾಷೆಯಲ್ಲಿ ಮೈದಳೆದಿವೆ. ತನ್ನ ಅಮೂಲ್ಯವಾದ ಶಬ್ಧಭಂಡಾರದಿಂದ ವಿಶ್ವದ ಬಹುತೇಕ ಭಾಷೆಗಳು ಸಂಮೃದ್ಧಗೊಳಿಸಿದೆ. ಜ್ಞಾನ-ವಿಜ್ಞಾನ-ತಂತ್ರಜ್ಞಾನಗಳ ಸಿದ್ಧಿ-ಸಾಧನೆಗೆ ಅಗರವೆನಿಸಿದೆ ಅಸಾಮಾನ್ಯ ಗ್ರಂಥರಾಶಿಗಳು ಈ ಭಾಷೆಯಲ್ಲಿ ಅಡಕಗೊಂಡಿವೆ.

ವಾಲ್ಮೀಕಿ. ವ್ಯಾಸ. ಕಾಳಿದಾಸ. ಭಾಸ. ಶೂದ್ರಕ. ವಿಶಾಕದತ್ತ. ಭವಭೂತಿ. ಬಾಣ. ದಂಡಿ. ಇನ್ನು ಮುಂತಾದ ಸಂಸ್ಕೃತದ ಮಹಾಕವಿಹಳ ಕವಿತಾಶಕ್ತಿಯಿಂದ ಸಂಸ್ಕೃತ ಸಾಹಿತ್ಯ ಮತ್ತು ಸಂಸ್ಕೃತಿ ತನ್ನ ನೆಲೆಯನ್ನ ಭದ್ರಗೊಳಿಸಿದೆ. ದೇವರ ಪೂಜೆ.ಭೂಮಿ ತಾಯಿಯ ಸ್ಮರಣೆ. ದೀಪಬೆಳಗಿಸುವುದು. ಈ ಎಲ್ಲಾ ಸಮಯದಲ್ಲಿ ಸಂಸ್ಕೃತಿಯ ನೆಲೆಯನ್ನು ಕಾಣುತ್ತೆವೆ.

ನಲಂದ ವಿಶ್ವವಿದ್ಯಾಲಯದಲ್ಲಿ ಅಧಿಕ ಸಂಖ್ಯೆಯ ಸುಮಾರು ೧೦ ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದ ದಾಖಲೆಯೂ ಇದೆ. ಪ್ರಸಿದ್ದ ಚೀನಾಯಾತ್ರಿಕರಗಿದ್ದ ಫಾಹಿಯಾನ್, ಯು.ಎನ್.ಚಿಯಾಂಗ್ ಮತ್ತು ಇತ್ಸಿಂಗರು ಇಲ್ಲಿ ಅಧ್ಯಯನ ಮಾಡಿದ್ದ ದಾಖಲೆ ಇದೆ. ಇವರು ಆಗಿನ ಮಧ್ಯಕಾಲೀನ ಭಾರತದ ವೈಭವ, ಸ್ಥಿತಿಗತಿಗಳ ಬಗ್ಗೆ ತಮ್ಮ ಕೃತಿಗಳಲ್ಲಿ ಪ್ರಸ್ತಾಪಿಸಿದ್ದಾರೆ. ಇತ್ಸಿಂಗನು ನಾಲ್ಕು ನೂರು ಸಂಸ್ಕೃತ ಗ್ರಂಥಗಳಿಂದ ಐದು ಲಕ್ಷ ಅಮೂಲ್ಯ ಶ್ಲೋಕಗಳನ್ನು ಸಂಗ್ರಹಿಸಿ ತನ್ನ ದೇಶಕ್ಕೆ ಒಯ್ದಿದ್ದಾನೆ. ಎಂಬ ದಾಖಲೆ ಇತಿಹಾಸದ ಪುಟಗಳಲ್ಲಿವೆ.



Scanned with OKEN Scanner

## ಸಂಸ್ಕೃತದ ಬುನಾದಿಯ ಮೇಲೆ ಸಂಸ್ಕೃತಿಯ ಭವ್ಯ ಸೌಧ

"ಸಂಸ್ಕೃತ ಮತ್ತು ಸಂಸ್ಕೃತಿ" ಇವೆರಡೂ ಕೂಡ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಸಂಸ್ಕೃತದ ಭದ್ರಬುನಾದಿಯ ಮೇಲೆ ಸಂಸ್ಕೃತಿಯ ಭವ್ಯಸೌಧ ನೆಲೆಗೊಂಡಿದೆ. ಯಾರು ಸಂಸ್ಕೃತವನ್ನು ತಿಳಿದಿದ್ದಾರೋ ಅವರು ಸುಸಂಸ್ಕೃತರು. ಸಂಸ್ಕೃತಿ ಶಬ್ದದ ಅರ್ಥವು ವಿಶಾಲವಾದುದು. ಜೀವನವನ್ನು ಉತ್ತಮಪಡಿಸಿಕೊಳ್ಳುವ ವಿಧಾನವೇ ಸಂಸ್ಕೃತಿ. ಮನುಷ್ಯ ಸ್ವಭಾವಕ್ಕೆ ಸೌಂದರ್ಯಕ್ಕೆ ಬೆಸುಗೆ ಸೊಬಗನ್ನು ಇಮ್ಮಡಿಗೊಳಿಸುವಂತೆ ಸಂಸ್ಕೃತ ಭಾಷೆಯಿಂದ ವೈಭವೀಕರಿಸಿದ ವಿಕಾಸವೇ "ಸಂಸ್ಕೃತಿ".

ವಾಲ್ಮೀಕಿ, ವ್ಯಾಸ, ಕಾಳಿದಾಸ, ಭಾಸ. ಶೂದ್ರಕ, ವಿಶಾಕದತ್ತ, ಭವಭೂತಿ, ಬಾಣ, ದಂಡಿ ಇನ್ನೂ ಮುಂತಾದ ಸಂಸ್ಕೃತದ ಮಹಾಕವಿಗಳ ಕವಿತಾಶಕ್ತಿಯ ಅಸಾಮಾನ್ಯವಾದುದು. ಇವರ ಸಾಹಿತ್ಯಗಳಲ್ಲಿ ಭಾರತೀಯ ಸಂಸ್ಕೃತಿಯು ಹಾಸುಹೊಕ್ಕಾಗಿದೆ. ಈ ಕವಿಪುಂಗವರು ಭಾರತೀಯರ ಭವ್ಯಜೀವನಶೈಲಿಯನ್ನು ಜಗತ್ತಿಗೇ ಮನಮುಟ್ಟುವಂತೆ ಬಣ್ಣಿಸಿದ್ದಾರೆ. ಮಾನವನ ಮೇಲ್ಮೆಗಾಗಿ ಅಮೂಲ್ಯವಾದ ಉಪದೇಶಗಳನ್ನು ಬಿಂಬಿಸಿದ್ದಾರೆ. ಸಂಸ್ಕೃತದಲ್ಲಿ ಏನಿದೆ? ಎಂದು ಕೇಳಿದರೆ ಅದರಲ್ಲಿ ಏನಿಲ್ಲ! ಎಂದು ಕೇಳಬೇಕಾಗುತ್ತದೆ. ಎನ್ನುವಷ್ಟರಮಟ್ಟಿಗೆ ಬೆಳೆಸಿದ್ದಾರೆ. यदिहास्ति तदन्यत्र यन्नेहास्ति न तत् क्वचित्। ಮಹಾಭಾರತದಲ್ಲಿ ಎಂದು ವೇದವ್ಯಾಸರು ಹೇಳುವ ಹಾಗೆ ಸಂಸ್ಕೃತ ಸಾಹಿತ್ಯದಲ್ಲಿ ಇಲ್ಲದ ವಿಷಯವೇ ಎಲ್ಲೂ ಇಲ್ಲ. ಯಾವುದು ಇಲ್ಲಿ ಉಕ್ತವಾಗಿದೆಯೋ ಅದು ಎಲ್ಲೆಡೆಯೂ ಇದೆ ಎಂಬ ವಿಶ್ವಕಲ್ಯಾಣಭಾವನೆಯು ಸಂಸ್ಕೃತ ಸಾಹಿತ್ಯದಲ್ಲಿ ಪ್ರಕಟಿತವಾಗಿದೆ. ಸಮೃದ್ಧಿಯನ್ನು ಮೂಡಿಸಿ ಮಾನವನನ್ನು ಸುಸಂಸ್ಕೃತನನ್ನಾಗಿ ಮಾಡುವ ಶಕ್ತಿ ಸಂಸ್ಕೃತ ಭಾಷೆಗೆ ಇದೆ. ಹೀಗೆ ಸಾವಿರಾರು ವರ್ಷಗಳಿಂದ ಭದ್ರವಾಗಿ ನೆಲೆಯೂರಿರುವ ಭಾಷೆ ಸಂಸ್ಕೃತ ಇಂಡೋಯೂರೋಪಿಯನ್ನಿನ ಪ್ರಾಚೀನ ಭಾಷೆಗಳಲ್ಲಿ ಈಗ ಉಳಿದಿರುವುದು ಸಂಸ್ಕೃತ ಭಾಷೆ ಮಾತ್ರ. ವಿಶ್ವದಲ್ಲೆ ಅತ್ಯಂತ ದೀರ್ಘವಾದ ಇತಿಹಾಸವನ್ನುಳ್ಳ ಸಾಹಿತ್ಯವೆಂದರೆ ಸಂಸ್ಕೃತ ಸಾಹಿತ್ಯ ಮಾತ್ರ.

– संस्कृतभाषा समस्त प्राकृतादिभाषाणाम जन्मभू

ಈ ಭಾಷೆಯು ಸಕಲ ಪ್ರಾಕೃತ ಭಾಷೆಗಳ ಉತ್ಪತ್ತಿಗೆ ಕಾರಣವಾಗಿದೆ. – संस्कृतं नाम दैवीवाक् अन्वाख्याता महर्षिभिः ಎಂದು ಮಹಾಕವಿ ಆಚಾರ್ಯ ದಂಡಿಯು ಬಣ್ಣಿಸಿದ್ದಾನೆ. ಈ ದಿವ್ಯ ಭಾಷೆಯಲ್ಲಿ ಕಾವ್ಯಾದಿಗಳನ್ನು ರಚಿಸಿ ವಾಲ್ಮೀಕಿ, ವ್ಯಾಸ, ಭಾಸ, ಕಾಲಿದಾಸ, ಬಾಣದೇ ಮೊದಲಾದ ಮಹಾಕವಿಗಳು' ಕೀರ್ತಿಗೆ ಭಾಜನರಾಗಿದ್ದಾರೆ.

ಒಂದಾನೊಂದು ಕಾಲದಲ್ಲಿ ಸಂಸ್ಕೃತವು ಬಹುಸಂಖ್ಯಾತ ಜನರ ಆಡುಭಾಷೆಯಾಗಿತ್ತು. ಭಾರತಕ್ಕೆ "ವಿಶ್ವಗುರು" ಎಂಬ ಶಬ್ದ ಲಭಿಸಿತ್ತು. ನಳಂದ ತಕ್ಷಶಿಲಾ ಮುಂತಾದ ಪ್ರಾಚೀನ ವಿಶ್ವವಿದ್ಯಾಲಯಗಳು ಸಂಸ್ಕೃತ ಭಾಷಾಭಿವೃದ್ಧಿಗಾಗಿ ಅಹರ್ನಿಸಿ ಶ್ರಮಿಸಿದ್ದವು. ಸಂಸ್ಕೃತವು ಭಾರತದ ಭವ್ಯಸಂಸ್ಕೃತಿಗೆ ಆಧಾರವಾಗಿರುವ ಕಾರಣದಿಂದಲೇ "ದೇವಭಾಷೆ" ಎನಿಸಿರುವುದು. ಈ ಭಾಷೆಯಲ್ಲಿರುವ ಶ್ರುತಿ. ಸ್ಮೃತಿ, ಪುರಾಣೇತಿಹಾಸಗಳು ಭಾರತೀಯ ಸಂಸ್ಕೃತಿಯ

प्रज्वालितो ज्ञानमय प्रदिपः ಎಂದು ಭಗವದ್ಗೀತೆಯ
ಪ್ರಜ್ವಲವಾದ ದೀಪಗಳು, ಇವುಗಳಲ್ಲಿ ತಿಳಿಸಲ್ಪಟ್ಟಿರುವ ವೇದಾಂತ ವಿಷಯಗಳು
ಉಕ್ತಿಯೇ ಈ ಮಹತ್ವವನ್ನು ಸಾರಿದೆ. ಆರ್ಯರ ಜೀವನ ವಿಧನವೂ ಭಾರತೀಯ
ವ್ರತ, ನಿಯಮ, ವಿವೇಕಾದಿ ಸಂಗತಿಗಳೂ ಅವಿಚ್ಛಿನ್ನವಾಗಿ ಹರಿದು ಬಂದಿರುವುದು
ಧರ್ಮವೇ ಆಗಿದೆ. ವಿಶ್ವಕ್ಕೆ ಪ್ರಪ್ರಥಮವಾಗಿ ಹಾಗೂ ಭಾರತವು ಜಗದ್ಗುರುವಾಗಿದೆ.
ನಮ್ಮ ಭಾರತೀಯಸಂಸ್ಕೃತಿ. ಈ ಭವ್ಯ ಸಂಸ್ಕೃತಿಯಿಂದಲೇ ಭಾರತೀಯ ನಾಗರೀಕತೆಯ
ಹೀಗೆ ಸಂಸ್ಕೃತ ವಿಶ್ವಮಾನ್ಯತೆಗಳಿಸಿದೆ. ವೇದಗಳ ಕಾಲದಿಂದಲೂ ಭಾರತೀಯ ಸಂಸ್ಕೃತಿಯ ನಿರ್ದಿಷ್ಟ
ಅಭಿವೃದ್ಧಿಗೆ ಪೋಷಕವಾದ ಭಾಷೆ ಸಂಸ್ಕೃತ ಇದು "ಭಾರತೀಯ ಸಂಸ್ಕೃತಿಯ ಪ್ರತೀಕ"
ಮೂಲಭೂತ ಮೌಲ್ಯಗಳ, ನೈತಿಕ ಶ್ರೇಷ್ಟತೆಗಳ ಮಾನವವರ್ಗದ ಭಾವೈಕ್ಯತೆಯ ಸಹಾಯಕ
ವಾಗಿದೆ. ದೈವಿಕ ಭಾವನೆ ಮತ್ತು ನಂಬಿಕೆಯನ್ನುಂಟು ಮಾಡಲು ಸಂಸ್ಕೃತವು ಭಾಷೆಯೆಂದರೆ
ಸಾಧನವಾಗಿದೆ. ಸಾಂಸ್ಕೃತಿಕ ಜೀವನದಲ್ಲಿ ಸಾಕಷ್ಟು ಪ್ರಭಾವ ಬೀರಿದ
ಸಂಸ್ಕೃತ, ಪಂಚಶೀಲ ತತ್ವಗಳು, ವಿಶ್ವಸೋದರತೆಯ ತತ್ತ್ವಗಳು, ವಿಶ್ವಕೌಟುಂಬಿಕ ತತ್ತ್ವಗಳು,
ಇವುಗಳಿಗೆ ಭಾರತೀಯ ಸಾಂಸ್ಕೃತಿಕ ಪರಂಪರೆಯ ಹಿರಿಮೆ ಲಭಿಸಿದೆ. ಒಟ್ಟಿನಲ್ಲಿ ಸಂಸ್ಕೃತ
ಆಧ್ಯಾತ್ಮಿಕ ಸಂಪತ್ತಿನ ಭದ್ರಬುನಾದಿಯಾಗಿದೆ. ವಿಶ್ವಮಾನ್ಯತೆ ಪಡೆದಿರುವ ಸತ್ಯ, ಅಹಿಂಸೆ,
, ದಯೆ, ಪ್ರೀತಿ ಮುಂತಾದ ಗಾಂಧಿತತ್ವಗಳು, ಪ್ರಾಚೀನ ಭಾರತದಲ್ಲಿಯೇ ಕಂಡು ಬರುವ
ಅಮೂಲ್ಯ ತತ್ವಗಳಾಗಿ ಇಂದಿಗೂ ವಿಜೃಂಭಿಸುತ್ತಿದೆ. ಭಾರತೀಯ ಸಂಸ್ಕೃತಿಯ
ವೈಶಿಷ್ಟ್ಯತೆಯೆಂದರೆ ಪರೋಪಕಾರಬುದ್ಧಿ ದಯೆ, ಧರ್ಮ, ಪರಮತಸಹಿಷ್ಣುತೆ ಹಾಗೂ
ಪಾಶ್ಚಿಮಾತ್ಯದಲ್ಲಿ ಹೆಚ್ಚಿನ ಮಟ್ಟದಲ್ಲಿ ಕಂಡು ಬರದ ದೈವಿಕ ಭಾವನೆ.

ಭಾರತೀಯರಲ್ಲಿ ಅನೇಕ ಹಬ್ಬ ಹರಿದಿನಗಳು ಆಚರಣೆಯಲ್ಲಿ ಇವೆ. ಹಿಂದೂಗಳಾದ ನಾವು ಶುಭಸಮಾರಂಭಗಳಲ್ಲಿ ಪುಣ್ಯತಿಥಿಗಳ ಕಾರ್ಯಗಳಿಗೆ ವೇದಮಂತ್ರಗಳನ್ನೇ ಅಳವಡಿಸಿಕೊಂಡಿದ್ದೇವೆ. ಉದಾ:

माङ्गल्यं तन्तुनानेन मम जीवनहेतुना
कण्टे बध्दनामि सुभगे । त्वं जीव शरदशशतम्

ಭಾರತದೇಶದ ಧರ್ಮ ಬಹಳ ಮಹತ್ವಪೂರ್ಣವಾದುದು. ಇದು ವಿವಿಧ ಪಂಗಡಗಳ ಆಚಾರ-ವಿಚಾರ ವ್ಯವಹಾರಗಳ ಸಂಗಮ. ಇದಕ್ಕೆ ಸಂಪರ್ಕಸೇತುವೆಯಾಗಿ ಸಂಸ್ಕೃತವು ಇದೆ. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಇದು ಹರಡಿದೆ. ಜನರಲ್ಲಿ ಐಕ್ಯತೆಯನ್ನು ಮೂಡಿಸುವುದರಲ್ಲಿ ಸಂಸ್ಕೃತದ ಹೆಗ್ಗಳಿಕೆಯ ಪಾತ್ರವಿದೆ. ಸಂಸ್ಕೃತ ಭಾರತೀಯರಿಗೆ ಉತ್ತಮ ಮಾರ್ಗದರ್ಶನ ನೀಡುತ್ತಿದೆ. ಸಂಸ್ಕೃತವು ಸಮಸ್ತ ರಾಷ್ಟ್ರದ ಐಕ್ಯತೆಯ ಸಾಧನವಾಗಿದೆ. ಸಂಸ್ಕೃತದ ಶಬ್ದ ಸಂಪತ್ತು ಮತ್ತು ಶೈಲಿ ತನ್ನದೇ ಆದ ವೈಶಿಷ್ಟತೆಯನ್ನು ಹೊಂದಿದೆ. ಬೆಳಗಾಗೆದ್ದು,

कराग्रे वसते लक्ष्मीः करमध्ये सरस्वती
करमूले स्थिता गौरी प्रभाते करदर्शनम्

ಎಂದು ಹೇಳಿಕೊಂಡು ಕೈ ಉಜ್ಜಿ ಅದರ ಬಿಸಿಯಾದ ಶಾಖವನ್ನು ಕಣ್ಣುಗಳಿಗೆ ನೀಡಿದರೆ ಕಣ್ಣಿನದೋಷ ಮಾಯವಾಗುತ್ತದೆ. ಎಂಬ ವೈಜ್ಞಾನಿಕ ಸತ್ಯವನ್ನು ಸಾರಿದೆ. ಬೆಳಿಗ್ಗೆಹಾಸಿಗೆಯಿಂದ ಎದ್ದಾಗ ಪಾದಗಳನ್ನು ಭೂಮಿಯ ಮೇಲೆ ಇರುವ ಮೊದಲು.

समुद्रवसने देवि पर्वतस्तनमण्डिते
विष्णुपत्नि नमस्तुभ्यं पादस्पर्श क्षमस्व मे

ಎಂದು ಹೇಳಿ ಭೂಮಿಗೆ ಅನಿವಾರ್ಯವಾಗಿ ಪಾದಸ್ಪರ್ಶವಾಗುವುದಕ್ಕೆ ಕ್ಷೆಮೆಕೋರುವುದು ಶಿಷ್ಟಾಚಾರವೂ ಸತ್ಸಂಪ್ರದಾಯವೂ ಆಗಿದೆ. ಆಕಸ್ಮಿಕವಾಗಿ ನಮ್ಮ ಪಾದವು ಯಾರಿಗಾದರೂ ಮುಟ್ಟಿದರೆ ನಾವು ಕೂಡಲೇ ಸಾರಿ ಕೇಳುವುದಿಲ್ಲವೇ ಹಾಗೆ, ಓಂಕಾರದ ಉಚ್ಚಾರಣೆಯೊಂದಿಗೆ ಸೂರ್ಯಮಂತ್ರವನ್ನು ಜಪಿಸುವಾಗ.

ಭೋಜನಕ್ಕೆ ಕುಳಿತಾಗ

अनपूर्ण सदापूर्ण शङ्करप्राणवल्लभे
ज्ञनवैराग्यसिध्दयर्थं भित्तां देहि च पार्वति

ಎಂದು ಧ್ಯಾನ ಮಾಡಿ ಭೋಜನ ಸೇವಿಸುತ್ತೇವೆ. ಭೋಜನದ ಜೊತೆಯಲ್ಲಿ "ಒಳ್ಳೆಯ ಜ್ಞಾನ ಮತ್ತು ವೈರಾಗ್ಯ ಬುದ್ಧಿ"ಯನ್ನು ಅನುಗ್ರಹಿಸು ಎಂದು ಕೇಳುವುದರಲ್ಲಿ ಅಡಗಿರುವ ಮಹತ್ವವನ್ನು ಇಲ್ಲಿ ಅರಿಯುವುದು ಮುಖ್ಯವಾಗಿದೆ.

ಸಂಧ್ಯಾಕಾಲದಲ್ಲಿ ದೀಪಬೆಳಗಿಸುವಾಗ

दीपमूले स्थितो ब्रहा दीपमर्ध्य जनादेनः

दीपाग्र शङ्करः प्रोक्तः सन्धयादीप नमोटस्तु ते

ಎಂದು ದೀಪದಲ್ಲಡಗಿರುವ ತ್ರಿಮೂರ್ತಿಗಳ ಧ್ಯಾನ ಮನಸ್ಸಿಗೆ ಮುದ ನೀಡುತ್ತದೆ. ಸದ್ಭಾವನೆ ನೆಲೆಸುತ್ತದೆ.

रामं स्कन्दं हनूमन्तं वैनतेयं वृकोदरम्
शयने यः स्मरेन्नित्यं दुस्सवप्नं तस्य नशयति

ಎಂದು ಹೇಳಿಕೊಳ್ಳುವ ಧ್ಯಾನಶ್ಲೋಕದಲ್ಲಿ ಹೆಸರಿಸಿರುವ ಪಂಚಮಹಾಪುರುಷರ ಸ್ಮರಣೆ ಹೇಗೆ ಕೆಟ್ಟ ಸ್ವಪ್ನಗಳ ನಿವಾರಣೆಗೆ ಕಾರಣವಾಗಿ ಸುಖನಿದ್ರೆ ಮಾಡಲು ಸಾಧ್ಯ ಎಂಬ ಮಹತ್ವ ಅಡಗಿರುವುದನ್ನು ಗುರುತಿಸಲಾಗಿದೆ.

ಸ್ನಾನ ಮಾಡುವ ಸಮಯದಲ್ಲಿ ದೇಶದಲ್ಲಿ ಹರಿಯುವಪ್ರಮುಖ ಸಪ್ತಪವಿತ್ರ ನದಿಗಳ ಹೆಸರುಗಳನ್ನು ಸ್ಮರಿಸುವುದು. ಆ ನೀರಿನಲ್ಲಿ ಅವುಗಳನ್ನು ಆವಾಹನ ಮಾಡಿಕೊಳ್ಳುವುದು ಸತ್ಸಂಪ್ರದಾಯವೇ ಆಗಿದೆ. ಜೊತೆಗೆ ಸಪ್ತನದಿಗಳ ಹೆಸರು ನೆನಪಿನಲ್ಲಿ ಉಳಿಯುತ್ತದೆ.



Scanned with OKEN Scanner

गङ्गे च यमुने चैव गोदावरी सरस्वति
नर्मदे सिन्धु कावेरि जलेस्मिन् सन्निधिं कुरु

ಭಾರತೀಯರ ಐಕ್ಯತೆಯ ಕುರುಹಾಗಿ ದಕ್ಷಿಣೋತ್ತರ ಭಾರತದ ಸಪ್ತ ಪರ್ವತಗಳ ಹೆಸರುಗಳನ್ನು ಸ್ಮರಿಸಿಕೊಳ್ಳುತ್ತೇವೆ. ಹಾಗೆಯೇ ಭಾರತದಾದ್ಯಂತ ಇರುವ ಪುಣ್ಯಮಯವಾದ ಕಾಶಿ, ಅಯೋಧ್ಯಾ, ಮಥುರಾ, ಮಾಯಾ (ಹರಿದ್ವಾರ)ಕಾಂಚೀ, ದ್ವಾರಾವತೀ, ಪುರೀ (ದ್ವಾರಕ) ಮುಂತಾದ ಸಪ್ತಮೋಕ್ಷಪುರೀ ಕ್ಷೇತ್ರಗಳನ್ನು ಸ್ಮರಿಸಿಕೊಳ್ಳುತ್ತೇವೆ.

**ಉಪಸಂಹಾರ**

ಒಟ್ಟಾರೆಯಾಗಿ ಶಿಕ್ಷಣ ಕ್ಷೇತ್ರಕ್ಕೆ ಸಂಸ್ಕೃತ ಸಾಹಿತ್ಯದ ಪ್ರಭಾವ ದಿಂದ ಸಂಸ್ಕೃತಿಯು ಆಧಾರ ಸ್ಥಂಭವಾಗಿ ಎಲ್ಲಾ ಕ್ಷೇತ್ರಗಳಲ್ಲಿ ಪ್ರಸರಿಸಿದೆ. ಪ್ರಾಚೀನ ಕಾಲದಿಂದ ನೂತನ ಕಾಲದವರೆಗೆ ಯಾರೇ ಹಿರಿಯಾರು ಕಂಡರು ಅವರನ್ನು ನಮಸ್ಕರಿಸುವ ಸ್ವಭಾವ ನಮ್ಮ ಸಂಸ್ಕೃತಿಯ ಕಲೆಯನ್ನು ತೋರಿಸುತ್ತದೆ. ವಾಲ್ಮೀಕಿ. ವ್ಯಾಸ. ಕಾಳಿದಾಸ. ಭಾಸ. ಶೂದ್ರಕ. ವಿಶಾಕದತ್ತ. ಭವಭೂತಿ. ಬಾಣ. ದಂಡಿ. ಇನ್ನು ಮುಂತಾದ ಸಂಸ್ಕೃತದ ಮಹಾಕವಿಹಳ ಕವಿತಾಶಕ್ತಿಯಿಂದ ಸಂಸ್ಕೃತ ಸಾಹಿತ್ಯ ಮತ್ತು ಸಂಸ್ಕೃತಿ ತನ್ನ ನೆಲೆಯನ್ನ ಭದ್ರಗೊಳಿಸಿದೆ. ಬೆಳ್ಳಗ್ಗೆಎಳುವಾಗ ದೇವರ ಸ್ಮರಿಸುವುದು. ಹಾಸಿಗೆ ಎದ್ದ ತಕ್ಷಣ ಭೂಮಿ ತಾಯಿಯನ್ನು ಸ್ಮರಿಸುವುದು. ದೀಪವನ್ನು ಬೆಳಗಿಸುವ ಸಮಯದಲ್ಲಿ ದೇವರಿಗೆ ಶ್ಲೋಕವನ್ನು ಹೇಳವುದು. ಪೂಜೆಮಾಡುವಾಗ. ಊಟಮಾಡುವಾಗ. ಸ್ನಾನಮಾಡುವಾಗ. ಪ್ರಯಾಣಮಾಡುವಾಗ. ವಿಶ್ರಾಂತಿ ತೆಗೆದುಕೊಳ್ಳವಾಗ ಪ್ರತಿ ಹಂತದಲು ದೇವರು. ಹಿರಿಯರ ಕಾರ್ಯಗಳನ್ನು ಸ್ಮರಿಸಿಕೊಳುತ್ತೆವು. ಇದರಿಂದ ನಮ್ಮ ಜೀವನ ಶೈಲಿಯ ಕ್ರಮ ಶಿಕ್ಷಣಕ್ಷೇತ್ರಕ್ಕೆ ಆಧಾರ ಸ್ಥಂಭವಾಗಿ ಬೆಳೆದಿದೆ.

■■



Scanned with OKEN Scanner